ಆ) ಹಾಗಿದ್ದಲ್ಲಿ ಸದರಿ ಜಮೀನನ್ನು ಬಡವರಿಗೆ ಮನೆ ಕಟ್ಟಿಕೊಳ್ಳಲು ಮಂಜೂರು ಮಾಡದಿರಲು ಕಾರಣವೇನು?

ಇ) ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಮುಧೋಳ ಸರ್ವೆ ನಂ. 543ರ ಒಟ್ಟು ಕ್ಷೇತ್ರ 26 ಎಕರೆ 19 ಗುಂಟೆ ಇದ್ದು, ಈ ಕೆಳಗಿನಂತೆ ಮಂಜೂರು ಮಾಡಲಾಗಿದೆ.

ಎಕರೆ	ಗುಂಟೆ
5-00	ಕೊಳಚೆ ನಿರ್ಮೂಲನಾ ಮಂಡಳಿ
5-00	ಖಾದಿ ಭಂಡಾರ
2-00	ಪ್ರಗತಿ ಶಾಲೆ
2-00	ರೇಷ್ಮೆ ಇಲಾಖೆ
12-00	ಆಶ್ರಯ ಯೋಜನೆಗಾಗಿ ಹಕ್ಕು ಪತ್ರ ನೀಡಿದೆ. ಆದುದರಿಂದ ಮಂಜೂರು ಮಾಡಲು ಜಮೀನು ಲಭ್ಯವಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಜಾಪುರ ಜಿಲ್ಲಾ ಮಧ್ಯವರ್ತಿ ಬ್ಯಾಂಕಿನ ಬಗ್ಗೆ

2996 - ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಬಿಜಾಪುರ ಜಿಲ್ಲಾ ಮಧ್ಯವರ್ತಿ ಸಹಕಾರಿ ಬ್ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರ ಸಂಖ್ಯೆ ಎಷ್ಟು? (ಹುದ್ದೆವಾರು ವಿವರ ನೀಡುವುದು)

2. ಅದರಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ನೌಕರರ ಸಂಖ್ಯೆ ಎಷ್ಟು?

3. ಶೇ. 18ರಷ್ಟು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರ ನೇಮಕಾತಿಯಾಗದೆ ಇರುವುದು ನಿಜವೇ? ಹಾಗಿದ್ದರೆ, ಸದ್ಯ ಖಾಲಿ ಇರುವ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ದವರನ್ನು ನೇಮಕ ಮಾಡಿಕೊಂಡು ಮೀಸಲಾಗಿತ ಪ್ರಮಾಣವನ್ನು ಕಾಪಾಡಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳಲು ಸಿದ್ಧವಿದೆಯೇ?

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರಿ ಸಚಿವರು) :

1. ಬಿಜಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಲ್ಲಿ 309 ಜನ ನೌಕರರು ಸೇವೆ ಸಲ್ಲಿಸುತ್ತಿದ್ದಾರೆ. (ಹುದ್ದೆವಾರು ತಃಖ್ತೆಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ)

2) 309 ನೌಕರರ ಪೈಕಿ 12 ನೌಕರರು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಕ್ಕೆ ಸೇರಿರುತ್ತಾರೆ.

3) ಹೌದು. ಬ್ಯಾಂಕಿನಲ್ಲಿ ವಿವಿಧ ದಿನಾಂಕಗಳಲ್ಲಿ ಈ ಹಿಂದೆ ಗುತ್ತಿಗೆ ಆಧಾರದ ಮೇಲೆ ದಿನಗೂಲಿ ಆಧಾರದ ಮೇಲೆ ನೇಮಕಾತಿ ಮಾಡಿಕೊಂಡು ನೌಕರರನ್ನು ಖಾಯಂಗೊಳಿಸಿದ್ದು, ಈವರೆಗೆ ನೇರ ನೇಮಕಾತಿ ಮಾಡಿರುವುದಿಲ್ಲ.

ಈ ಕಛೇರಿಯ ಆದೇಶ ದಿನಾಂಕ 2-7-1992 ರಲ್ಲಿ 65 ವಿವಿಧ ದರ್ಜೆಯ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಿದ್ದು, ಹುದ್ದೆಗಳನ್ನು ಭರ್ತಿ ಮಾಡುವಾಗ ಮೀಸಲಾತಿ ನಿಯಮಗಳನ್ನು ಪಾಲಿಸಲು ಬ್ಯಾಂಕಿಗೆ ಸೂಚನೆ ನೀಡಲಾಗಿದೆ.

ಅನುಬಂಧ - 1

ವಿಜಾಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ. ವಿಜಾಪುರ ಇವರ ಸಿಬ್ಬಂದಿಯ ಹುದ್ದೆವಾರು ವಿವರ ಹಾಗೂ ಇವರಲ್ಲಿ ಹಾಲೀ ಕಾರ್ಯನಿರ್ವಸುತ್ತಿರುವ ಸಿಬ್ಬಂದಿ ಹಾಗೂ ಅವುಗಳ ಪೈಕಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ನೌಕರರು.

ಕ್ರಮ ಸಂಖ್ಯೆ	ಹುದ್ದೆಯ ವಿವರ	ಒಟ್ಟು ಮಂಜೂರಾದ ಸಿಬ್ಬಂದಿ	ಈ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ	ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಪೈಕಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ
1	2	3	4	5
1.	ವ್ಯವಸ್ಥಾಪಕ ನಿರ್ದೇಶಕರು	1	1	-
2.	ಉಪ ಪ್ರಧಾನ ವ್ಯವಸ್ಥಾಪಕರು	2	2	-
3.	ವಿಭಾಗೀಯ ವ್ಯವಸ್ಥಾಪಕರು	6	1	-
4.	ಹಿರಿಯ ನಿರೀಕ್ಷಕರು	32	2	-
5.	ಹಿರಿಯ ಶಾಖಾ ವ್ಯವಸ್ಥಾಪಕರು	56	45	1
6.	ಕ್ಷೇತ್ರ ಸಿಬ್ಬಂದಿ	68	59	3

1	2	3	4	5
7.	ಗುಮಾಸ್ತ ಗ್ರೇಡ್-1 ಟೈಪಿಸ್ಟ್	172	116	5
8.	ಗುಮಾಸ್ತ ಗ್ರೇಡ್-II	18	13	2
9.	ವಾಹನ ಚಾಲಕ: ನಾಯಕ	7	3	-
10.	ಸಿಪಾಯಿ(ಜವಾನ) ಭದ್ರತಾ ಸಿಬ್ಬಂದಿ	135	62	1
		497	**309**	**12**

ಮೊಳಕಾಲ್ಮೂರು ತಾಲ್ಲೂಕಿನ ಅಭಾವ ಸ್ಥಿತಿ

2997-- ಶ್ರೀ ಎನ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೊಳಕಾಲ್ಮೂರು ತಾಲ್ಲುಕು ಬರಗಾಲ ಪೀಡಿತ ಪ್ರದೇಶವೆಂದು ಸರ್ಕಾರವು ಈಗಾಗಲೇ ಘೋಷಿಸಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಮೊಳಕಾಲ್ಮೂರು ತಾಲ್ಲೂಕು ಬರಗಾಲ ಪೀಡಿತವೆಂದು ಸರ್ಕಾರಕ್ಕೆ ಮನವರಿಕೆಯಾಗಿದೆಯೇ?

ಈ) ಹಾಗಿದ್ದಲ್ಲಿ, ಈ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿ, ಮುಂದಿನ ಪರಿಹಾರ ಕಾರ್ಯಕ್ರಮಗಳನ್ನು ಸರ್ಕಾರವು ಕೈಗೊಳ್ಳುವುದೇ?

ಶ್ರೀ ರಮೇಶ್. ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಇಲ್ಲ.

ಆ) ತಾಲ್ಲೂಕಿನಲ್ಲಿ ಬಿದ್ದಿರುವ ಮಳೆ ವ್ಯಾಪಕವಾಗಿಲ್ಲದಿದ್ದರೂ ವಾಡಿಕೆ ಮಳೆ 202 ಮಿ.ಮೀ.ಗೆ ವ್ಯತಿರಿಕ್ತವಾಗಿ ಇಲ್ಲಿಯವರೆಗೆ 161.00 ಮಿ.ಮೀ ಮಳೆಯಾಗಿದೆ. ಆದ್ದರಿಂದ ಮೊಳಕಾಲ್ಮೂರು ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿಲ್ಲ.

ಇ) ಮೊಳಕಾಲ್ಮೂರು ತಾಲ್ಲೂಕಿನ ರಾಂಪುರ, ನಾಗಸಮುದ್ರ, ಸಿದ್ದಾಪುರ, ಬಿ.ಬಿ. ಹಳ್ಳಿ, ದೇವಸಮುದ್ರ, ಸಂತೇಗುಡ್ಡ, ತಮ್ಮೇನಹಳ್ಳಿಗಳಲ್ಲಿ ಮಳೆಯಾಗಿರುವುದಿಲ್ಲ. ತಾಲ್ಲೂಕಿನ ಸಾಮಾನ್ಯ ಬಿತ್ತನೆ ಕ್ಷೇತ್ರ 33,380 ಹೆಕ್ಟೇರ್‌ಗೆ ವ್ಯತಿರಿಕ್ತವಾಗಿ 18,820 ಹೆಕ್ಟೇರುಗಳಲ್ಲಿ ಬಿತ್ತನೆಯಾಗಿದ್ದರೂ ಕಡಿಮೆ ಮಳೆಯಿಂದಾಗಿ 405 ಹೆಕ್ಟೇರ್ ಪ್ರದೇಶದಲ್ಲಿ ಮೊಳಕೆ ಬಾಧಿತಗೊಂಡಿದೆ.